**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**
**ಸಿ.ಸಿ. ನಂಬ್ರಃ 390/2018**

ಪಿರ್ಯಾಧಿದಾರರು :- ಪೊಲೀಸ್ ವೃತ್ತನಿರೀಕ್ಷಕರು,
ಗಂಗೊಳ್ಳಿ ಪೋಲಿಸ್ ಠಾಣೆ

-ವಿರುದ್ಧ –

ಆಪಾದಿತರು :- ಅಜೋಮನ್ ವರ್ಗೀಸ್, 25 ವರ್ಷ,
ತಂದೆಃ Varghese Scaria,
ವಾಸಃ Udichamuklel House,
Athiaampuzha Post,
Kottayam Taluk.

**: ಆಪಾದನೆ :**

**ಶ್ರೀ ಶ್ರೀಕಂಠ ಎಸ್.ಎ., ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ**

ದಿ. 09.12.2017 ರಂದು , ಸಾಕ್ಷಿ 2 ಮತ್ತು 3ನೇಯವರು ಕುಂದಾಪುರ ತಾಲೂಕು ತ್ರಾಸಿ ಗ್ರಾಮದ ಹೊಸಪೇಟೆ ಎಂಬಲ್ಲಿ ರಾ.ಹೆ. 66 ರಲ್ಲಿ ರಸ್ತೆಯ ದಕ್ಷಿಣ ಭಾಗದಲ್ಲಿ ಮೋಟಾರು ಸೈಕಲಿನಲ್ಲಿ ಸವಾರಿ ಮಾಡಿಕೊಂಡು ಹೋಗುತ್ತಿರುವಾಗ ಕುಂದಾಪುರ ಕಡೆಯಿಂದ ಕೆ.ಎಲ್.05 ಎ.ಎಮ್ 9795 ನೇ ನಂಬ್ರದ ಲಾರಿಯನ್ನು ಆರೋಪಿತರಾದ ನೀವು ಮಾನವನ ಜೀವಕ್ಕೆ ಅಪಾಯಕಾರಿಯಾಗುವ ರೀತಿಯಲ್ಲಿ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿದ್ದು ಆ ಮುಖಾಂತರ ನೀವು ಭಾ.ದಂ.ಸಂ. ಕಲಂ 279 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವೆಸಗಿದ್ದು, ಸದ್ರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡುರುವಿರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಒಂದು ವಾಹನವನ್ನು ಓವರ್‌ಟೇಕ್ ಮಾಡುವ ಭರದಲ್ಲಿ ರಾ.ಹೆ. 66 ರ ಉತ್ತರ ಭಾಗದಲ್ಲಿ ಬೆಳಿಗ್ಗೆ 8.30 ಗಂಟೆಗೆ ಮುಗುಳೊಳ್ಳಿ ಕಡೆಯಿಂದ ತ್ರಾಸಿ ಕಡೆಗೆ ಸವಾರಿ ಮಾಡಿಕೊಂಡು ಬರುತ್ತಿದ್ದ ಆನಂದ ಹೆಬ್ಬಾರ ಎಂಬರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಸೈಕಲ್ ಸಮೇತ ರಸ್ತೆಗೆ ಬಿದ್ದು ತಲೆಗೆ, ಕೈ ಕಾಲಿಗೆ ತೀವ್ರ ಸ್ವರೂಪದ ರಕ್ತಗಾಯವಾಗಿ ಚಿಕಿತ್ಸೆಯ ಬಗ್ಗೆ ಕೆ.ಎಂ.ಸಿ. ಮಣಿಪಾಲ

ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯದಲ್ಲಿ ಬೆಳಿಗ್ಗೆ 9.40 ಗಂಟೆಗೆ ಮೃತಪಟ್ಟಿದ್ದು ಆ ಮುಖಾಂತರ ನೀವು ಭಾ.ದಂ.ಸಂ. ಕಲಂ 304(ಎ)ರೀತ್ಯಾ ಶಿಕ್ಷಾರ್ಹವಾದ ಅಪರಾಧವೆಸಗಿದ್ದು, ಸದ್ರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡುರುವಿರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ-1ಃ ಈ ಅಪರಾಧದ ಬಗ್ಗೆ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

(ದಿನಾಂಕಃ 04ನೇ ಅಕ್ಟೋಬರ್ ತಿಂಗಳು 2018ರಂದು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ಮೇಲಿನ ಆರೋಪವನ್ನು ಓದಿ ಹೇಳಿ ವಿವರಿಸಿ ಉತ್ತರ ಪಡೆದುಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.**

Phs